<u>**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**</u>

<u>**ಪಾಟೀ ಸವಾಲುಃ- 1 ನೇ ಪ್ರತಿವಾದಿ ಪರ ಶ್ರೀ ಎಲ್.ಎಂ ವಕೀಲರಿಂದಃ**</u>

ಈಗ ನನಗೆ 80 ವರ್ಷ ವಯಸ್ಸು ಇರುತ್ತದೆ. ಗಾರೆ ಮನೆ ದ್ಯಾವಣ್ಣ ನನ್ನ ಮಾವ ಇರುತ್ತಾರೆ. ಅವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಮೊದಲನೆ ಹೆಂಡತಿ ತಿಪ್ಪಮ್ಮನ ಮಗಳು ಮೂಕಮ್ಮ ಅಲಿಯಾಸ್ ನಾಗಮ್ಮ ಎಂದರೆ ಸರಿ. 2 ನೇ ಹೆಂಡತಿ ಗುಂಡಮ್ಮನಿಗೆ ಗಾರೆ ಮನೆ ಭೀಮಣ್ಣ ಹಾಗೂ ಗಾರೆಮನೆ ಮಹಂತಣ್ಣ ಇಬ್ಬರು ಮಕ್ಕಳು ಎಂದರೆ ಸರಿ. ಮಹಂತಣ್ಣ ನನ್ನ ಯಜಮಾನರು ಇರುತ್ತಾರೆ. ಸುಮಾರು 25 ವರ್ಷದ ಹಿಂದೆ ನನ್ನ ಗಂಡ ತೀರಿಕೊಂಡಿರುತ್ತಾರೆ. ಸುಶೀಲಮ್ಮ ಮರಣನಂತರ ಮಹಂತಣ್ಣ ತೀರಿಕೊಂಡಿರುತ್ತಾರೆ. ಸುಶೀಲಮ್ಮ ಹಾಗೂ ಮಹಂತಣ್ಣ ತೀರಿಕೊಂಡಾಗ ಮೂಕಮ್ಮ ಜೀವಂತಇದ್ದರು.

2. ದಾವಾ ಸ್ವತ್ತಿನ ವಿವರ ಈಗ ನನಗೆ ಹೇಳಲು ಬರುವುದಿಲ್ಲ. ದಾವಾ ಸ್ವತ್ತುಗಳು ಮೂಕಮ್ಮನ ಆಸ್ತಿಗಳು ಎಂದರೆ ಸರಿ. ಗಾರೆಮನೆ ಭೀಮಣ್ಣ ಹಾಗೂ ಗಾರೆಮನೆ ಮಹಂತಣ್ಣನ ಮಧ್ಯೆ ಈ ಹಿಂದೆ ಪಾಲುವಿಭಾಗವಾಗಿತ್ತು ಎಂದರೆ ಸರಿಯಲ್ಲ. ದಿಃ 05.02.1986 ರಂದು ಗಾರೆಮನೆ ಭೀಮಣ್ಣ ಹಾಗೂ ಗಾರೆಮನೆ ಮಹಂತಣ್ಣ ಇಬ್ಬರೂ ನೊಂದಾಯಿತ ಪಾಲುವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದನ್ನು ಬರೀ ಹೆಸರಿಗೆ ಮಾಡಿಕೊಂಡಿದ್ದು ಖಾತೆ ಬದಲಾವಣೆ ಮಾಡಿರುವುದಿಲ್ಲ. ಸದರಿ ಪಾಲುವಿಭಾಗದಲ್ಲಿ ಗಾರೆಮನೆ ಭೀಮಣ್ಣನಿಗೆ ಕೆಲವು ಜಮೀನುಗಳು ಬಂದಿದ್ದವು. ಅದೇ ರೀತಿ ಗಾರೆಮನೆ ಮಹಂತಣ್ಣನಿಗೆ ಒಂದು ಜಮೀನು ಬಂದಿತ್ತು ಎಂದರೆ ಸರಿ. ನಾನು ಸದರಿ ಗಾರೆಮನೆ ಮಹಂತಣ್ಣನ ಹೆಂಡತಿ ಎಂದರೆ ಸರಿ. ಗಾರೆಮನೆ ಮಹಂತಣ್ಣನಿಗೆ ಪಾಲುವಿಭಾಗದಲ್ಲಿ ಬಂದಂತಹ ಸ.ನಂ. 27 ನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಅನುಭವ ಸ್ವಾಧೀನ ಯಾರು ಹೊಂದಿರುತ್ತಾರೆ ಎಂದು ಗೊತ್ತಿಲ್ಲ.

3. ಮೂಕಮ್ಮ ಜೀವಿತ ಕಾಲದಲ್ಲಿ ಆಕೆಯನ್ನು ಗಾರೆಮನೆ ಭೀಮಣ್ಣ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎಲ್ಲರೂ ನೋಡಿಕೊಳ್ಳುತ್ತಿದ್ದೆವು. ಗಾರೆಮನೆ ಭೀಮಣ್ಣ 1 ನೇ ಪ್ರತಿವಾದಿಯವರ ತಂದೆ ಎಂದರೆ ಸರಿ. ಮೂಕಮ್ಮನನ್ನು ಯಾರು ನೋಡಿಕೊಳ್ಳದೇ ಇರುವುದರಿಂದ ಗಾರೆಮನೆ ಭೀಮಣ್ಣ ಹಾಗೂ 1 ನೇ ಪ್ರತಿವಾದಿಯವರು ಮೂಕಮ್ಮನನ್ನು ಹಾಗೂ ಆಕೆಯ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮೂಕಮ್ಮ ಹಾಗೂ ಆಕೆಯ ಗಂಡ ರುದ್ರಪ್ಪರಿಗೆ ನಾವು ಯಾರು ಆಶ್ರಯ

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸುಮಾರು 15-20 ವರ್ಷಗಳ ಹಿಂದೆ ಮೂಕಮ್ಮ ತೀರಿಕೊಂಡಿರುತ್ತಾರೆ. ಮೂಕಮ್ಮ ಸಾಯುವವರೆಗೆ ಆರೋಗ್ಯವಂತರಾಗಿದ್ದರು ಎಂದರೆ ಸರಿ. ಮೂಕಮ್ಮ ದಿಃ01.04.1991 ರಂದು ಆರೋಗ್ಯವಂತರಾಗಿದ್ದಾಗ 1 ನೇ ಪ್ರತಿವಾದಿಯ ತಂದೆ ಗಾರೆಮನೆ ಭೀಮಣ್ಣನ ಹೆಸರಿನಲ್ಲಿ ಒಂದು ನೊಂದಾಯಿತ ಮರಣಶಾಸನ ಪತ್ರದ ಮೂಲಕ ದಾವಾ ಸ್ವತ್ತುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಮೂಕಮ್ಮ ತೀರಿಕೊಂಡ ಮೇಲೆ ಮರಣಶಾಸನ ಪತ್ರದಲ್ಲಿ ಇರುವ ಸ್ವತ್ತುಗಳಿಗೆ ಗಾರೆಮನೆ ಭೀಮಣ್ಣ ಸಂಪೂರ್ಣ ವಾರಸುದಾರರಾಗಿರುತ್ತಾರೆ ಎಂದರೆ ಸುಳ್ಳು.

4. ನಾನು ಹಾಗೂ ವಾದಿಗಳು ಯಾವತ್ತಿಗೂ ದಾವಾ ಸ್ವತ್ತಿನ ಸ್ವಾಧೀನ ಅನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಗಾರೆಮನೆ ಭೀಮಣ್ಣ ಯಾವಾಗ ತೀರಿಕೊಂಡಿರುತ್ತಾರೆ ಎಂದು ಗೊತ್ತಿಲ್ಲ. ಗಾರೆಮನೆ ಭೀಮಣ್ಣ ತೀರಿಕೊಂಡಾಗ ದಾವಾ ಸ್ವತ್ತು ಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತವೆ ಎಂದರೆ ಸರಿ. ನಮಗೆ ಗೊತ್ತಿಲ್ಲದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ. ಸುಮಾರು 6-7 ವರ್ಷಗಳ ಹಿಂದೆ ಭೂ ಸ್ವಾಧೀನವಾದಾಗ ನಮಗೆ 1 ನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನುಗಳು ಖಾತೆ ಬದಲಾವಣೆಯಾಗಿರುವುದು ಗೊತ್ತಾಗಿರುತ್ತದೆ. ಮೂಕಮ್ಮ ಮರಣಶಾಸನ ಪತ್ರವನ್ನು ಬರೆದಿರುವುದು ಹಾಗೂ ಅವರ ಮರಣಾನಂತರ ಗಾರೆಮನೆ ಭೀಮಣ್ಣನ ಹೆಸರಿಗೆ ಖಾತೆ ಬದಲಾವಣೆಯಾಗಿರುವುದು ನಮಗೆ ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 1991 ರಲ್ಲಿ ಮೂಕಮ್ಮ ಮರಣಶಾಸನ ಪತ್ರ ಬರೆದಾಗ ಆಕೆಯ ಮಗಳು ಸುಶೀಲಮ್ಮ ತೀರಿಕೊಂಡಿದ್ದಳು ಎಂದರೆ ಸರಿ. 1 ನೇ ಪ್ರತಿವಾದಿಯವರು ದಾವಾ ಸ್ವತ್ತುಗಳನ್ನು 4 ಮತ್ತು 5 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ಅವರನ್ನು ಪಕ್ಷಗಾರರಾಗಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮಾರಾಟ ಮಾಡಿರುವ ವಿಷಯ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ರಸ್ತೆಗಾಗಿ ಭೂ ಸ್ವಾಧೀನವಾದಾಗ ಸದರಿ ವಿಷಯ ಗೊತ್ತಾಯಿತು. ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ 4 ಮತ್ತು 5 ನೇ ಪ್ರತಿವಾದಿಯರು ಇರುತ್ತಾರೆ ಎಂದರೆ ಗೊತ್ತಿಲ್ಲ. ನನಗೆ ದಾವಾ ಸ್ವತ್ತುಗಳ ಪ್ರತಿಯೊಂದು ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಾವಾ ಸ್ವತ್ತುಗಳ ಪಹಣಿಗಳನ್ನು ಹೊರತುಪಡಿಸಿ ನನ್ನ ಹತ್ತಿರ ಬೇರೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ನಾವು ಹಿಂದೆ ಹೂಡಿರುವ ದಾವಾ ಸಂಖ್ಯೆ 135/2016 ಯಾವ ಕಾರಣಕ್ಕಾಗಿ ವಜಾ ಆಗಿದೆ ಎಂದು ಗೊತ್ತಿಲ್ಲ. ಸುಮಾರು 10-15 ವರ್ಷಗಳಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆ. ಯಾವ ವರ್ಷದಲ್ಲಿ ಯಾವ ಬೆಳೆ ಬೆಳೆದಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ನಾವು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಬೆಳೆದಿರುವ ಬೆಳೆಯ ಆದಾಯದ ಬಗ್ಗೆ ಯಾವುದೇ ಲೆಕ್ಕ ಪತ್ರ ಇಟ್ಟಿರುವುದಿಲ್ಲ. ಸುಶೀಲಮ್ಮ ಮೂಕಮ್ಮನ ಮಗಳು ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಾನು ಗಾರೆ ಮಹಂತಣ್ಣನ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿ ನನ್ನ ಮಕ್ಕಳು ಇರುತ್ತಾರೆ. 2 ನೇ ಪ್ರತಿವಾದಿ ಚಿಕ್ಕಗೊಂಡನಹಳ್ಳಿಯಲ್ಲಿ ಇರುತ್ತಾರೆ. ನಾನು 2 ನೇ ಪ್ರತಿವಾದಿಯವರೊಂದಿಗೆ ಅನ್ಯೋನ್ಯವಾಗಿ ಇರುವುದಿಲ್ಲ. 2 ನೇ ಪ್ರತಿವಾದಿಯವರು ಈ ದಾವೆ ಹೂಡಲು ಬರುವುದಿಲ್ಲ ಎಂದು ಸಲಹೆ ನೀಡಿದರೂ ಕೂಡ ನಾನು ಉಳಿದ ವಾದಿಯವರೊಂದಿಗೆ ಸೇರಿ ಅವರ ವಿರುದ್ದ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

7. ಮೂಕಮ್ಮನನ್ನು ಹೊರತುಪಡಿಸಿ ದಾವಾ ಸ್ವತ್ತುಗಳಲ್ಲಿ ಯಾರಿಗೂ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಲಪಟಾಯಿಸಲು ಹಾಗೂ 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪ್ರತಿವಾದಿ 3(ಎ) ಮತ್ತು (ಬಿ) ಹಾಜರಿರುವುದಿಲ್ಲ ಆದುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ